ಪೊಲೀಸ್ ವೃತ್ತಿ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿರುವ ತುರುವೇಕೆರೆ ರವಿಶಂಕರ್, ತಮ್ಮ ವೃತ್ತಿ ಕ್ಷೇತ್ರದ ಅನುಭವಗಳ ಪಾಕವನ್ನು ಬರವಣಿಗೆಯಲ್ಲಿ ಕಟ್ಟಿಕೊಡುವವರು. ಅವರ ಹುಟ್ಟೂರು ತುಮಕೂರು ಜಿಲ್ಲೆಯ ತುರುವೇಕೆರೆ. ಓದಿದ್ದು ಕೆಮಿಕಲ್ ಎಂಜಿನಿಯರಿಂಗ್ ಪದವಿ. ಬರವಣಿಗೆ ಮತ್ತು ಓದು ಅವರ ಪ್ರಿಯ ಹವ್ಯಾಸ.

ಹಿರಿಯರ ಸ್ವತ್ತು ಅನ್ನುವಂತಿಲ್ಲ. ಆಗತಾನೆ ಹುಟ್ಟಿದ ಹಾಲುಗಲ್ಲದ ಹಸುಳೆಯೂ ಸಹ ಕೆಮ್ಮಬಹುದು. ಕಣ್ಣುಮುಚ್ಚಿ ತಾಯ ಮೊಲೆ ಹಾಲು ಕುಡಿಯುತ್ತಲೇ ನೆತ್ತಿಗೇರಿಸಿಕೊಂಡು ಕ್ಕ್.. ಕ್ಕ್.. ಅನ್ನಬಹುದು. ಥಟ್ಟನೆ ತಾಯಿ ಮಗುವನ್ನು ಮಡಿಲಿಗೆ ಒತ್ತಿಕೊಳ್ಳುತ್ತಾಳೆ. ಹಗುರವಾಗಿ ನೆತ್ತಿ ನೇವರಿಸುತ್ತಾಳೆ. ಮಗುವಿಗೆ ಮುದ್ದಿಕ್ಕುತ್ತಾಳೆ. ಕೆಮ್ಮು ಮಂಗಮಾಯ...

ಯಾವುದೇ ನೌಕರರು ರಜೆ ಕೇಳುವ ಸಂದರ್ಭದಲ್ಲಿ ಕೆಮ್ಮಿನ ಸಹಾಯ ಪಡೆದೇ ತೀರುತ್ತಾರೆ. ಏನಾದರೂ ಅರ್ಜೆಂಟು ಕೆಲಸವಿದ್ದಾಗ ತಮ್ಮ ಮೇಲಧಿಕಾರಿಗೆ ಫೋನು ಹಚ್ಚಿ 'ಯಾಕೋ ಸ್ವಲ್ಪ ಉಸಾರಿಲ್ಲ ಸಾ.. ಬೆಳಗಿನಿಂದ ಕೆಮ್ಮೂ, ತಲೆನೋವೂ...' ಅಂತ ಹೇಳಿ ಕೆಮ್ಮಿದಂತೆ ಮಾಡಿದರೆ ಮುಗಿಯಿತು. 'ಆಯ್ತಾಯ್ತು... ರೆಸ್ಟು ಮಾಡ್ರೀ... ಪೂರ್ತಿ ಹುಷಾರು ಮಾಡಿಕೊಂಡೇ ಬನ್ನಿ...' ಅನ್ನುತ್ತಾರೆ. ಅಲ್ಲಿಗೆ ರಜೆ ಸ್ಯಾಂಕ್ಷನ್! ಶಾಲಾ ಮಕ್ಕಳಾದರೂ ಅಷ್ಟೆ. ನೆಗಡಿ, ಕೆಮ್ಮು ಅಂದರೆ ಯಾವ ಗುರುವೂ ಅವರನ್ನು ಸ್ಕೂಲಿಗೆ ಬರಲೇಬೇಕು ಅಂತ ಒತ್ತಾಯ ಮಾಡುವಷ್ಟು ಕಾಠಿಣ್ಯ ತೋರುವುದಿಲ್ಲ.

